ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027. ಭಾರತ
ದೂರವಾಣಿ : 080-22221321 / 22221325
ವೆಬ್–ಸೈಟ್ : www.ksrtc.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂ.ಕರಾಸಾ/ಕೇಕ/ಸಂ/ವಾ–1/1531/19-20 ದಿನಾಂಕ:31.10.2019

**ಸುತ್ತೋಲೆ ಸಂಖ್ಯೆ: 1515/2019**

**(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)**

**ವಿಷಯ:** ಕ.ರಾ.ರ.ಸಾ ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳ ವಾಣಿಜ್ಯ ಮಳಿಗೆ / ಜಾಹೀರಾತು ಪರವಾನಗಿದಾರರು ಕರಾರು ಒಪ್ಪಂದ ಮುಕ್ತಾಯದ ನಂತರ ಮಳಿಗೆ / ಸ್ಟ್ರಕ್ಚರ್‌ಗಳನ್ನು ತೆರವುಗೊಳಿಸಲು ತಡಮಾಡಿದಲ್ಲಿ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು.

**ಉಲ್ಲೇಖ:** 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017 ದಿ:26-07-2017.
2. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 788/2017 ದಿ:26-07-2017.
3. ಸಂ.ಕರಾಸಾ/ಕೇಕ/ಸಂ/ವಾ-1/549/2019-20 ದಿ: 27-06-2019.
4. ದಿನಾಂಕ 09.09.2019 ರಂದು ನಡೆದ ಸಿಸಿಜಿ ಸಭೆಯ ತೀರ್ಮಾನ / ನಡಾವಳಿ.

–&–

ಕ.ರಾ.ರ.ಸಾ ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆ ಮತ್ತು ಜಾಹೀರಾತು ಪ್ಯಾಕೇಜ್‌ಗಳಿಗೆ ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶಗಳನ್ವಯ ಪರವಾನಗಿದಾರರ ಆಯ್ಕೆ ಹಾಗೂ ಕರಾರು ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. ಆಯ್ಕೆಯಾದ ಪರವಾನಗಿದಾರರಿಂದ ಕರಾರು ಒಪ್ಪಂದ ಮುಕ್ತಾಯದ ದಿನಾಂಕದಂದು ಕಟ್ಟಿದ ಮಳಿಗೆ / ತೆರೆದ ಮಳಿಗೆಯಿಂದ ಅವರ ಸಾಮಗ್ರಿಗಳನ್ನು ತೆರವುಗೊಳಿಸಿ, ಖಾಲಿ ಸ್ಥಳವನ್ನು ನಿಗಮದ ವಶಕ್ಕೆ ಪಡೆಯಬೇಕಿರುತ್ತದೆ. ಆದರೆ ಪರವಾನಗಿದಾರರು ಸಾಮಗ್ರಿಗಳನ್ನು ತೆರವುಗೊಳಿಸುವಲ್ಲಿ ವಿಳಂಬ ಮಾಡುತ್ತಿರುವುದು ಕಂಡು ಬರುತ್ತಿದೆ. ಇಂತಹ ಪ್ರಕರಣಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಸಂಬಂಧ ಮೇಲ್ಕಂಡ ಆದೇಶಗಳಲ್ಲಿ ಯಾವುದೇ ಅಂಶಗಳನ್ನು ಅಳವಡಿಸಿರುವುದಿಲ್ಲ. ಇದರಿಂದ ನಿಗಮಕ್ಕೆ ಆರ್ಥಿಕ ನಷ್ಟ ಉಂಟಾಗುತ್ತಿದ್ದು, ಸದರಿ ನಷ್ಟವನ್ನು ತಪ್ಪಿಸಲು ಇಂತಹ ಪ್ರಕರಣಗಳಲ್ಲಿ, ಅಗತ್ಯ ಕ್ರಮ ಕೈಗೊಳ್ಳುವಂತೆ ದಿನಾಂಕ 09.09.2019 ರಂದು ನಡೆದ ಸಿಸಿಜಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೇಲ್ಕಂಡ ಪ್ರಕರಣಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕೆಳಕಂಡಂತೆ ತಿಳಿಸಲಾಗಿದೆ.

1. ಪರವಾನಗಿದಾರರು ಕರಾರಿನ ಅವಧಿ ಮುಗಿಯುವ ದಿನ ಮಳಿಗೆಯನ್ನು / ತೆರೆದ ಸ್ಥಳಗಳಲ್ಲಿ ಸ್ಟ್ರಕ್ಚರ್‌ಗಳೊಂದಿಗೆ ಖಾಲಿ ಮಾಡಬೇಕು. ಕರಾರಿನ ಮುಕ್ತಾಯ ದಿನಾಂಕದ ನಂತರ ಮಳಿಗೆಯಲ್ಲಿ ವ್ಯವಹಾರವನ್ನು ನಡೆಸುವಂತಿಲ್ಲ.
2. ಒಂದು ವೇಳೆ ಮಳಿಗೆಯನ್ನು ತೆರವುಗೊಳಿಸಲು ವಿಳಂಬ ಮಾಡಿದಲ್ಲಿ, ಕೆಳಕಂಡಂತೆ ದಂಡ ವಿಧಿಸಲು ಕ್ರಮ ವಹಿಸುವುದು.

| ಕ್ರ.ಸಂ. | ವಿಳಂಬದ ದಿನಗಳು | ವಿಧಿಸಬೇಕಿರುವ ದಂಡದ ಮೊತ್ತ ಶೇ.ವಾರು |
|---|---|---|
| 1 | ಮಳಿಗೆಯನ್ನು ತೆರವುಗೊಳಿಸಲು 07 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪರವಾನಗಿ ಶುಲ್ಕದ ಶೇ.25 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸುವುದು. |
| 2 | ಮಳಿಗೆಯನ್ನು ತೆರವುಗೊಳಿಸಲು 07 ದಿನಗಳ ಮೇಲ್ಪಟ್ಟು, 15 ದಿನಗಳವರೆಗಿನ ವಿಳಂಬಕ್ಕೆ, | ಕೊನೆಯ ತಿಂಗಳ ಪರವಾನಗಿ ಶುಲ್ಕದ ಶೇ.50 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸುವುದು. |

| | | |
|---|---|---|
| 3 | ಮಳಿಗೆಯನ್ನು ತೆರವುಗೊಳಸಲು 15 ದಿನಗಳ ಮೇಲ್ಪಟ್ಟು, ಒಂದು ತಿಂಗಳವರೆಗಿನ ವಿಳಂಬಕ್ಕೆ, | ಕೊನೆಯ ತಿಂಗಳ ಪೂರ್ಣ ಪರವಾನಗಿ ಶುಲ್ಕದಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳು |

**<u>ಸೂಚನೆ:</u> ಕೊನೆಯ ತಿಂಗಳ ಪರವಾನಗಿ ಶುಲ್ಕವೆಂದರೆ, ಪೂರ್ತಿ ತಿಂಗಳಿಗೆ ಅನ್ವಯವಾಗುವ ಪರವಾನಗಿ ಶುಲ್ಕ.**

3) ಪರವಾನಗಿದಾರರು ಒಂದು ತಿಂಗಳೊಳಗಾಗಿ ಮಳಿಗೆಯಲ್ಲಿನ ವಸ್ತುಗಳನ್ನು ಹಾಗೂ ತೆರೆದ ಸ್ಥಳಗಳಲ್ಲಿ Structure ನ್ನು ತೆರವುಗೊಳಿಸಲು ವಿಫಲರಾದಲ್ಲಿ, ಅವುಗಳನ್ನು ಮುಟ್ಟುಗೋಲು ಹಾಕಿಕೊಂಡು ಪರವಾನಗಿದಾರರ ಖರ್ಚಿನಲ್ಲಿ ತೆರವುಗೊಳಿಸಲು / ವಿಲೇವಾರಿ ಮಾಡಲು ನಿಗಮದ ವತಿಯಿಂದ ಕ್ರಮ ಕೈಗೊಳ್ಳುವುದು.

4) ಮಳಿಗೆಯಲ್ಲಿನ ವಸ್ತುಗಳನ್ನು ಮತ್ತು ತೆರೆದ ಸ್ಥಳಗಳ ಮಳಿಗೆಗಳ Structure ಗಳನ್ನು ತೆರವುಗೊಳಿಸಿರುವುದನ್ನು ಖಚಿತಪಡಿಸಿಕೊಂಡು, ಅವರಿಂದ ಬರಬೇಕಾಗಿರುವ ಬಾಕಿ ಮೊತ್ತವನ್ನು ಹೊಂದಾಣಿಕೆ ಮಾಡಿದ ನಂತರ, ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲು ಕ್ರಮ ಕೈಗೊಳ್ಳುವುದು.

ಉಳಿದಂತೆ ಉಲ್ಲೇಖಿತ ಆದೇಶ ಮತ್ತು ಪೂರಕ ಸುತ್ತೋಲೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸದರಿ ಸುತ್ತೋಲೆಯು ತಕ್ಷಣದಿಂದಲೇ ಜಾರಿಗೆ ಬರುತ್ತದೆ. ಆದೇಶ ಪಡೆದು ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ಕಳುಹಿಸುವುದು.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
**ವ್ಯವಸ್ಥಾಪಕ ನಿರ್ದೇಶಕರು**
**ಕರಾರಸಾ ನಿಗಮ**

**ಪ್ರತಿಯನ್ನು:**

1) ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ಅಧ್ಯಕ್ಷರು / ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6) ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.